


# ಸಾವಿನ ನಂತರವೂ ಗಡಿ ಕಾಯುತ್ತಿರುವ ಸೈನಿಕ?

ಸಾವಿನ ನಂತರವೂ ಒಬ್ಬ ಸೈನಿಕ ತನ್ನ ದೇಶದ ಗಡಿ ಕಾಯುತ್ತಾನೆಂದರೆ ಅದು ನಂಬಲಸಾಧ್ಯವಾದ ಮಾತು. ಆದರೆ, ಭಾರತದ ಗಡಿಭಾಗದ ಜನರಲ್ಲಿ ಇಂಥದೊಂದು ನಂಬಿಕೆಯಿದೆ. ಸಿಕ್ಕಿಂ ಬಳಿ ಇರುವ ಭಾರತ–ಚೀನಾ ಗಡಿಭಾಗ ನಾಥು ಲಾ ಪಾಸ್. ಇಲ್ಲಿ ನಮ್ಮ ದೇಶದ ಗಡಿ ಭಾಗವನ್ನು ಭಾರತೀಯ ಸೈನಿಕನೊಬ್ಬ ತನ್ನ ಸಾವಿನ ನಂತರವೂ ಕಾಯುತ್ತಿದ್ದಾನೆ ಎಂದು ಸ್ಥಳೀಯರು ಹಾಗೂ ಆ ಭಾಗದಲ್ಲಿ ಕಾರ್ಯನಿರತರಾದ ಸೈನಿಕರು ನಂಬುತ್ತಾರೆ.

ಸತ್ತ ನಂತರವೂ ದೇಶದ ಗಡಿ ಕಾಯುತ್ತಿದ್ದಾನೆ ಎನ್ನುವ ನಂಬಿಕೆಯ ಮೂಲಕ ಜನರ ಮನಸ್ಸಿನೊಳಗೆ ಜೀವಂತನಾಗಿರುವ ವ್ಯಕ್ತಿ ಪಂಜಾಬ್ ರೆಜಿಮೆಂಟಿನ ಸೈನಿಕ ಬಾಬಾ ಹರಭಜನ್ ಸಿಂಗ್. ಆತ, ಕಳೆದ 49 ವರ್ಷಗಳಿಂದ ತನ್ನ ಪಹರೆಯ ಕಾರ್ಯ ನಿರ್ವಹಿಸುತ್ತಿದ್ದಾನಂತೆ. ಹರಭಜನ್ ಸಿಂಗ್‌ನ ಆತ್ಮ ಚೀನಿ ಸೈನಿಕರಿಂದ ಭಾರತಕ್ಕೆ ಒದಗಬಹುದಾದ ಅಪಾಯ ಹಾಗೂ ಗಡಿಭಾಗದಲ್ಲಿ ಅವರ ಸೈನಿಕರ ಚಲನವಲನಗಳನ್ನು ನಮ್ಮ ಸೈನಿಕರಿಗೆ ಮೊದಲೇ ತಿಳಿಸುತ್ತದಂತೆ.

ಭಾರತದ ಸೈನಿಕರು ಮಾತ್ರವಲ್ಲ, ಚೀನೀ ಪಡೆಯಲ್ಲೂ ಬಾಬಾ ಬಗ್ಗೆ ನಂಬಿಕೆಯಿದೆ. ಆ ಕಾರಣದಿಂದಲೇ ಉಭಯ ದೇಶಗಳ ಸೈನಿಕರ ನಡುವೆ ನಡೆಯುವ ಪ್ರತಿ ಧ್ವಜ ಕವಾಯಿತಿನಲ್ಲಿ ಬಾಬಾನಿಗಾಗಿ ಖಾಲಿ ಖುರ್ಚಿಯೊಂದನ್ನು ಇಟ್ಟಿರುತ್ತಾರೆ.

## ಯಾರೀ ಬಾಬಾ?

ಬಾಬಾ ಎನಿಸಿಕೊಂಡ ಹರಭಜನ್ ಸಿಂಗ್ ಒಬ್ಬ ಸಾಮಾನ್ಯ ಭಾರತೀಯ ಸೈನಿಕ. ಆತ ಜನಿಸಿದ್ದು, ಪಂಜಾಬಿನ ಗುಜರಾವಾಲಾ ಜಿಲ್ಲೆಯ ಸಡ್ರಾನಾ ಎಂಬ ಹಳ್ಳಿಯ ಪಂಜಾಬಿ ಕುಟುಂಬ ಒಂದರಲ್ಲಿ ಆಗಸ್ಟ್ 30ರ, 1946ರಲ್ಲಿ. ತನ್ನ ಹಳ್ಳಿಯ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ನಂತರ, 1965ರಲ್ಲಿ ಪಟ್ಟಿಪಂಜಾಬ್‌ನ ಎ.ವಿ.ಡಿ. ಪ್ರೌಢ ಶಾಲೆಯಲ್ಲಿ ಕಲಿತು, ನಂತರ ಅಮೃತಸರದ ಪಂಜಾಬ್ ರೆಜಿಮೆಂಟಿನಲ್ಲಿ ಸೈನಿಕನಾಗಿ ಸೇರ್ಪಡೆಯಾದ.

1968ರ ಅಕ್ಟೋಬರ್ 4ರಂದು ಹರಭಜನ್ ತನ್ನ ಬೆಟಾಲಿಯನ್ನಿನ ಪ್ರಧಾನ ಕಚೇರಿ ತುಕ್ಲಾದಿಂದ ಡೆಂಗ್ ಚಕ್ಲಾಗೆ ಹೇಸರಗತ್ತೆಗಳ ಮೂಲಕ ಸಾಮಾನುಗಳನ್ನು ಸಾಗಿಸುತ್ತಿದ್ದಾಗ, ಕಾಲುಜಾರಿ ವೇಗವಾಗಿ ಹರಿಯುತ್ತಿರುವ ನದಿಯ ಪ್ರವಾಹದಲ್ಲಿ ಮುಳುಗಿ ಕೊಚ್ಚಿಕೊಂಡುಹೋದ. ಸೈನಿಕರು ಎಷ್ಟು ಹುಡುಕಿದರೂ ಆತನಾಗಲೀ, ಹೆಣವಾಗಲೀ ಸಿಗಲಿಲ್ಲ. ಸಾವಿಗೀಡಾದ ಹರಭಜನ್ ತನ್ನ ರೆಜಿಮೆಂಟಿನ ಗೆಳೆಯನ ಕನಸಿನಲ್ಲಿ ಕಾಣಿಸಿಕೊಂಡು, ತನ್ನ ಹೆಣ ಇಂತಹ ಸ್ಥಳದಲ್ಲಿದೆಯೆಂದು ತಿಳಿಸಿದನಲ್ಲದೆ, ತನ್ನ ನೆನಪಿಗಾಗಿ ಸಮಾಧಿಯನ್ನು ನಿರ್ಮಿಸಬೇಕೆಂದು ಹೇಳಿದನಂತೆ. ಅದರಂತೆ, ಪಂಜಾಬ್ ರೆಜಿಮೆಂಟ್ ಹರಭಜನ್ ಬಂಕರ್ ಇದ್ದಲ್ಲಿ ಸಮಾಧಿಯನ್ನು ನಿರ್ಮಿಸಿ ಅದಕ್ಕೆ ಮಂದಿರ ರೂಪವನ್ನು ನೀಡಿದೆ. ದಿನಗಳೆದಂತೆ ಬಾಬಾನ ಚಮತ್ಕಾರಗಳು ಹೆಚ್ಚಾಗತೊಡಗಿ, ಬಹಳಷ್ಟು ಜನರಿಗೆ ಬಾಬಾನಲ್ಲಿ ಶ್ರದ್ಧೆ, ಭಕ್ತಿ ಅಧಿಕಗೊಂಡು, ಭಕ್ತಸಮೂಹವೇ ರೂಪುಗೊಂಡಿದೆ.

ಗಡಿ ಪ್ರದೇಶದಲ್ಲಿ ಅತಿ ಎತ್ತರದಲ್ಲಿರುವ ಬಾಬಾಮಂದಿರಕ್ಕೆ ಹೋಗುವುದು ಕಷ್ಟವಾದುದರಿಂದ ಭಕ್ತಜನರ ಅನುಕೂಲಕ್ಕಾಗಿ, ಗ್ಯಾಂಗ್‌ಟಾಕ್‌ನಿಂದ ನಾಥುಲಾಗೆ ಹೋಗುವ ಮಾರ್ಗದ ಬಳಿ, ಬಾಬಾನ ಹೊಸ ಮಂದಿರ ಕಟ್ಟಿ, ಅದಕ್ಕೆ ‘ಹರಭಜನ್ ಸಿಂಗ್ ಬಾಬಾ ಮಂದಿರ’ ಎಂದು ನಾಮಕರಣ ಮಾಡಲಾಗಿದೆ. ಈ ಎರಡೂ ದೇವಾಲಯಗಳ ನಿರ್ವಹಣೆಯ ಕಾರ್ಯವನ್ನು ಭಾರತೀಯ ಪಂಜಾಬ್ ರೆಜಿಮೆಂಟ್ ವಹಿಸಿಕೊಂಡಿದೆ.